ಅವರು ಆ ಕಾಲದಲ್ಲಿ ಏನಾದ್ರೂ ಇಂಗ್ಲಿಷಿನಲ್ಲಿ ಬರೆದಿದ್ರೆ ಅವರು ಡಾ. ಅಂಬೇಡ್ಕರ್ ಅವರಷ್ಟೇ ಪ್ರಸಿದ್ಧಿ ಪಡೀತಿದ್ರು. ಎಷ್ಟು ತೀವ್ರವಾಗಿ ಪುರೋಹಿತಶಾಹಿಯನ್ನು ವಿರೋಧಿಸಿದ್ರು. ಎಷ್ಟು ನೋವನ್ನು ಅವರು ಅನುಭವಿಸಿದ್ದಾರೆ ಅನ್ನೋದು ಅನೇಕರಿಗೆ ಗೊತ್ತಿಲ್ಲ. ಆದರೆ, ಒಬ್ಬ ತರುಣ ವಿದ್ವಾಂಸ ಅವರ ಬಗ್ಗೆ ವಕ್ರವಾಗಿ ಮಾತಾಡ್ದಾಗ ನನಗೆ ದುಃಖವಾಯಿತು. ಅವರು ಓದಿ ಮಾತಾಡಿದರೆ ತೊಂದರೆ ಇರಲಿಲ್ಲ. ಓದದೇ ಮಾತಾಡುವುದು, ಬ್ರಾಹ್ಮಣರೆಂಬ ಏಕೈಕ ಕಾರಣಕ್ಕೆ ಅವರ ಬರಹವನ್ನು ತೆಗಳೋದು ಇದೆಲ್ಲ ಯಾವ ವಿಮರ್ಶಾ ಸಂಸ್ಕೃತಿ? ಹದಿನೈದು ವರ್ಷಗಳ ಅನಂತರ ಅವರೇ ಶಂಬಾ ಬಗ್ಗೆ ಒಂದು ಪುಸ್ತಕ ಬರೆದ್ರು. ನನಗೆ ನಿಜಕ್ಕೂ ಸಂತೋಷವಾಯಿತು. ಅವರು ನನ್ನನ್ನು ಎಷ್ಟೇ ಬಯ್ಯಲಿ, ನನಗೆ ಬೇಸರ ಇಲ್ಲ. ಆದರೆ, ಇಂಥದ್ದೊಂದು ಪರಿವರ್ತನೆ ಮೂಲಕ ಶಂಬಾ ಅವರ ಒಳಗೆ ಇಳಿದರಲ್ಲ, ನನಗದು ಇಷ್ಟವಾಯಿತು. ಎಲ್ಲಾ ತರಹದ ಪೂರ್ವಗ್ರಹಗಳಿಂದ ಕಳಚಿಕೊಂಡ ಓದುವ ಸಂಸ್ಕೃತಿಯನ್ನು ಹೇಗೆ ರೂಪಿಸೋದು? ಅಂತ ನಾನು ವಿಚಾರ ಮಾಡ್ತಾ ಇದ್ದೇನೆ. ಇನ್ನೂ ಹಲವಾರು ಪೂರ್ವಗ್ರಹಗಳನ್ನು ನಮ್ಮ ಅನೇಕ ವಿಮರ್ಶಕರಿಂದ ಹೆಕ್ಕಿ ತೋರಿಸಬಹುದು; ಅದರ ಅಗತ್ಯ ಈಗ ಇಲ್ಲ. ಕನ್ನಡ ವಿಮರ್ಶೆ ಹೊಸ ತಾತ್ವಿಕತೆಗಳನ್ನು ಹುಡುಕಿಕೊಳ್ಳಬೇಕಾದರೆ ಈಗಿರುವ ಪೂರ್ವಗ್ರಹಗಳಿಂದ ಮೊದಲು ಕಳಚಿಕೊಳ್ಳಬೇಕಾಗಿದೆ.

◆ **ಈಗ ಕನ್ನಡ ವಿಮರ್ಶೆಯ ವಾತಾವರಣದಲ್ಲಿ ನಿಮಗೆ ಆತಂಕ ಉಂಟುಮಾಡುವ ಸಂಗತಿ ಯಾವುದು?**

ಸೂಕ್ಷ್ಮವಾಗಿ ಯಾರು ಯೋಚನೆ ಮಾಡಿದರೂ ನನಗೆ ಅವರ ಬಗ್ಗೆ ಅಪಾರ ಪ್ರೀತಿ. ಎಳೆಯರಾಗಿದ್ರೆ ಅವರನ್ನು ಬೆಳೆಸೋಕೆ ಪ್ರಯತ್ನಿಸ್ತೀನಿ. ಅದು ಬಹಳ ನಿಗೂಢವಾಗಿ ನಡೆಯೊ ಕೆಲಸ. ಏಕಾಂತದಲ್ಲಿ ನಡೆಯೊ ಕೆಲಸ. ಏಕಾಂತದಲ್ಲಿ, ಕತ್ತಲಿನಲ್ಲಿ ನನಗೆ ಅನೇಕ ಹೊಳಹುಗಳು ಕಾಣಿಸ್ತವೆ. ನೀವು ನಂಬುತ್ತೀರೊ ಇಲ್ಲವೊ. ನನಗೆ ಮಲಗಿದಾಗ ಅರೆ ನಿದ್ದೆ ಅರೆ ಎಚ್ಚರದಲ್ಲಿ ಅನೇಕ ವಿಚಾರಗಳು ಹೊಳೆದಿದ್ದಾವೆ. ಅನೇಕ ಸೂಕ್ಷ್ಮಗಳು ಕಾಣಿಸಿದ್ದಾವೆ. ಏನೋ ಒಂದು ಯೋಚನೆ ಮಾಡ್ತಾ ಇರುವಾಗ ಸಂಪೂರ್ಣ ನಿದ್ದೆಗೆ ಹೋಗಲಿಕ್ಕಾಗಲ್ಲ ನನಗೆ. ಹಾಗೆ ಹೊಳೆದಿದ್ದನ್ನು ಎಷ್ಟೋ ಸಲ ಆವಾಗಲೇ ಎದ್ದು ಬರೆದಿದ್ದೀನಿ. ಬೆಳಗ್ಗೆ ಬರೆದಿದ್ದೀನಿ. ವಿಮರ್ಶೆಯೂ ಒಂದು ಉದ್ದೀಪನ, ಉನ್ಮಾದ, ಧ್ಯಾನ ಅಂತಲೇ ತಿಳಕೊಂಡಿದ್ದೀನಿ. ಈ ಕಾಪಿ ಪೇಸ್ಟ್ ವಿಮರ್ಶಕರು, ಮೀಡಿಯೋಕರ್‌ಗಳು, ಅಸೂಕ್ಷ್ಮಜ್ಞರನ್ನು ಕಂಡಾಗ ಬೇಸರವಾಗುತ್ತೆ. ಎಲ್ಲಾ ಕಾಲಕ್ಕೂ ಸೂಕ್ಷ್ಮಜ್ಞರ ಸಂಖ್ಯೆ ಕಡಿಮೆಯೆ. ಸೂಕ್ಷ್ಮಜ್ಞರನ್ನು ಹುಡುಕುವುದು, ಬೆಳೆಸುವುದು ಒಂದು ಸಂಸ್ಕೃತಿಯ ಜವಾಬ್ದಾರಿಯಾಗಬೇಕು. ಸೂಕ್ಷ್ಮಜ್ಞರನ್ನು ನಾಶಮಾಡುವುದಲ್ಲ. ಹಾಗೆ ಮಾಡ್ತಾ ಹೋದರೆ ಯಾವ ವಿಮರ್ಶೆಯೂ ಸಾಧ್ಯವಿಲ್ಲ, ಯಾವ ಸಂಸ್ಕೃತಿಯೂ ಉಳಿಯುವುದಿಲ್ಲ.


**ವಿಕ್ರಂ ವಿಸಾಜಿ**

ಕಲಬುರ್ಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು. ಮೂಲತಃ ಬೀದರ ಜಿಲ್ಲೆಯ ಭಾಲ್ಕಿಯವರಾದ ವಿಕ್ರಂ, ಕಲಬುರ್ಗಿಯ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. 'ತಮಾಷಾ', 'ಗ್ರೀಕ್ ಹೊಸ ಕಾವ್ಯ', 'ರಕ್ತ ವಿಲಾಪ', 'ಬಿಸಿಲ ಕಾಡಿನ ಹಣ್ಣು', 'ರಸಗಂಗಾಧರ', 'ಮತ್ತೆ ಬಂತು ಶ್ರಾವಣ', 'ನಾದಗಳು ನುಡಿಯಾಗಲೇ', 'ಪಠ್ಯದ ಭಾವಾವಳಿ', 'ಸಿಮೊನ್ ದ ಬೋವಾ' ಅವರ ಕೆಲವು ಪ್ರಕಟಿತ ಪುಸ್ತಕಗಳಾಗಿವೆ.